# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1021(1120) |
| ಸದಸ್ಯರ ಹೆಸರು | : ಶ್ರೀ ಬಸನಗೌಡ ಬಾದರ್ಲಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 16-12-2025. |
| ಉತ್ತರಿಸುವ ಸಚಿವರು | : ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸಕ್ತ ವರ್ಷದ ಹಜ್ ಯಾತ್ರೆಗೆ ಸಿಂಧನೂರು ತಾಲ್ಲೂಕಿನಿಂದ ಒಟ್ಟು ಎಷ್ಟು ಅರ್ಜಿದಾರರು ನೋಂದಾವಣೆ ಮಾಡಿಕೊಂಡಿದ್ದಾರೆ; | ಪ್ರಸಕ್ತ ವರ್ಷದ ಹಜ್ ಯಾತ್ರೆಗೆ ಸಿಂಧನೂರು ತಾಲ್ಲೂಕಿನಿಂದ ಒಟ್ಟು 19 ಅರ್ಜಿದಾರರು ನೋಂದಾವಣೆ ಮಾಡಿಕೊಂಡಿರುತ್ತಾರೆ. |
| ಆ) | ಹಜ್ ಯಾತ್ರಿಕರಿಗೆ ಸರ್ಕಾರ ನೀಡುವ ಸಬ್ಸಿಡಿ ಆರ್ಥಿಕ ನೆರವು ಅಥವಾ ಯಾವುದೇ ವಿಶೇಷ ಸೌಲಭ್ಯಗಳ ವಿವರಗಳನ್ನು ನೀಡುವುದು; | ಕರ್ನಾಟಕ ರಾಜ್ಯ ಹಜ್ ಸಮಿತಿಯ ವತಿಯಿಂದ ಪ್ರತಿ ವರ್ಷ ಯಾತ್ರಾರ್ಥಿಗಳು ತಮ್ಮ ಸ್ವಂತ ಖರ್ಚಿನಿಂದ ಹಜ್ ಯಾತ್ರೆಗೆ ಪ್ರಯಾಣ ಮಾಡುತ್ತಾರೆ.<br>ಹಜ್ ಯಾತ್ರೆಗೆ ಪ್ರಯಾಣಿಸುವ ಯಾತ್ರಾರ್ಥಿಗಳಿಗೆ ಕರ್ನಾಟಕ ರಾಜ್ಯ ಹಜ್ ಸಮಿತಿ / ರಾಜ್ಯ ಮತ್ತು ಕೇಂದ್ರ ಸರ್ಕಾರದ ವತಿಯಿಂದ ಆರ್ಥಿಕವಾಗಿ ಯಾವುದೇ ರೀತಿಯ ಅನುದಾನ / ಸಹಾಯಧನ ನೀಡಲಾಗುವುದಿಲ್ಲ.<br>ಕರ್ನಾಟಕ ರಾಜ್ಯ ಹಜ್ ಸಮಿತಿಯ ವತಿಯಿಂದ ಈ ಯಾತ್ರಾರ್ಥಿಗಳಿಗಾಗಿ ಹಜ್ ಕ್ಯಾಂಪ್‌ಗಳನ್ನು ಆಯೋಜಿಸಿ ಮೂಲಭೂತ ಸೌಲಭ್ಯ/ಸೌಕರ್ಯ ಗಳನ್ನು ಒದಗಿಸಲಾಗುತ್ತಿದೆ. |
| ಇ) | ಹಜ್ ಯಾತ್ರೆಯ ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೌಲಭ್ಯಗಳ ವಿತರಣೆಯಲ್ಲಿ ಸಮಾನತೆ ಕಾಪಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; | ಕೇಂದ್ರ ಸರ್ಕಾರದ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ಅನುಮೋದನೆಯ ನಂತರ ಮುಂಬೈನ ಭಾರತೀಯ ಹಜ್ ಸಮಿತಿಯ ವತಿಯಿಂದ ಕಲ್ಪಿಸಿರುವ ಕೇಂದ್ರೀಕೃತ ವೆಬ್ ಸರ್ವರ್‌ನಿಂದ ಗಣಕೀಕೃತ ಲಾಟರಿ (ಖುರ್ರಾ) ಮುಖಾಂತರ ಜಿಲ್ಲಾವಾರು ನಿಗದಿಪಡಿಸಿರುವ ಖೋಟಾದನ್ವಯ ಹಜ್ ಯಾತ್ರಿಕರ ಆಯ್ಕೆ ಪ್ರಕ್ರಿಯೆ ಆಯೋಜಿಸಲಾಗುತ್ತಿದೆ. |
| ಈ) | ಯಾತ್ರಿಕರ ಸುರಕ್ಷತೆ, ವೈದ್ಯಕೀಯ ಸಹಾಯ ಮತ್ತು ತುರ್ತು ಪರಿಸ್ಥಿತಿಗಳ ನಿರ್ವಹಣೆಗೆ ಸರ್ಕಾರ ಕೈಗೊಂಡಿರುವ ವಿಶೇಷ ಕ್ರಮಗಳ ಮಾಹಿತಿ ನೀಡುವುದು? | ಕರ್ನಾಟಕ ರಾಜ್ಯ ಹಜ್ ಸಮಿತಿಯ ವತಿಯಿಂದ ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಕಾರದೊಂದಿಗೆ ಆಯ್ಕೆಯಾದ ಯಾತ್ರಿಕರಿಗೆ ಮೆನಂಜೈಟಿಸ್ ಲಸಿಕೆ / ಚುಚ್ಚುಮದ್ದು ಹಾಗೂ ಪೋಲಿಯೋ ಲಸಿಕೆ ಕಾರ್ಯಕ್ರಮವನ್ನು ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಆಯೋಜಿಸಲಾಗುತ್ತಿದೆ.<br>ಹಜ್ ಯಾತ್ರಿಕರಿಗೆ ಯಾತ್ರೆಯು ಸುಗಮವಾಗಿ ಹಾಗೂ ಸುಖಕರವಾಗಿ ಮಾಡಲು ಸಹಾಯಕವಾಗುವಂತೆ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯ ಹಜ್ ಸಮಿತಿಯು ಆಯೋಜಿಸುತ್ತದೆ. |

| | | | |
|---|---|---|---|
| | | | ಹಜ್ ಯಾತ್ರೆಗಾಗಿ ಸೌದಿ ಅರೇಬಿಯಾ ತಲುಪಿದ ಯಾತ್ರಿಕರ ಸಹಾಯಕ್ಕಾಗಿ ಜಿದ್ದಾದಲ್ಲಿರುವ ಭಾರತೀಯ ಕಾನ್ಸುಲೇಟ್ ಜನರಲ್ ರವರು ನೋಡಿಕೊಳ್ಳುತ್ತಿದ್ದು, ಸೌದಿ ಅರೇಬಿಯಾಕ್ಕೆ ರಾಜ್ಯದಿಂದ ಆಗಮಿಸುವ ಹಜ್ ಯಾತ್ರಿಕರ ಕಲ್ಯಾಣವನ್ನು ನೋಡಿಕೊಳ್ಳಲು ಸರ್ಕಾರದ ಸೇವೆಯಲ್ಲಿರುವವರನ್ನು ಸ್ಟೇಟ್ ಹಜ್ ಇನ್ಸ್‌ಪೆಕ್ಟರ್ ಗಳನ್ನಾಗಿ ನಿಯೋಜಿಸಲಾಗುತ್ತಿದೆ. |

ಸಂಖ್ಯೆ:MWD 218 LMQ 2025

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು.